# ಅಧ್ಯಾಯ 5

## ಮಾರ್ಷಲ್ ಮತ್ತು ಭಾಗಶಃ ಸಮತೋಲನದ ಸಿದ್ಧಾಂತ

ಅರ್ಥಶಾಸ್ತ್ರದ ಕುರಿತು ಬರೆದಂತಹ ಅತ್ಯಂತ ಪ್ರಭಾವಶಾಲಿ ಪುಸ್ತಕಗಳಲ್ಲಿ ಒಂದು ಆಲ್ಫ್ರೆಡ್ ಮಾರ್ಷಲ್ ಅವರ 'ಪ್ರಿನ್ಸಿಪಲ್ಸ್ ಆಫ್ ಎಕನಾಮಿಕ್ಸ್' (1890). ಅದು ಅಭಿವೃದ್ಧಿಪಡಿಸಿರುವ ಭಾಗಶಃ ಸಮತೋಲನಗಳ ವಿಧಾನವು ಇಂದಿಗೂ ಸಹ ಸರ್ವವ್ಯಾಪಿಯಾಗಿದ್ದು, ಅರ್ಥಶಾಸ್ತ್ರವೆಂದರೆ ಬೇಡಿಕೆ ಮತ್ತು ಪೂರೈಕೆಯ ವಿಜ್ಞಾನದ ಒಂದು ಕಲ್ಪನೆ ಎಂದು ರೂಪಿಸುತ್ತದೆ. ಇಷ್ಟಾಗಿ ಮಾರ್ಷಲ್ ಅವರನ್ನು ಕೇವಲ ಇದೊಂದು ಕಲ್ಪನೆಗೆ ಸೀಮಿತಗೊಳಿಸುವುದು ಸಾಧ್ಯವಿಲ್ಲ. ಬದಲಿಗೆ ಅವರು, "ಅರ್ಥಶಾಸ್ತ್ರಜ್ಞನೊಬ್ಬನ ಪವಿತ್ರ ಸ್ಥಳವಿರುವುದು ಆರ್ಥಿಕ ಜೀವಶಾಸ್ತ್ರದಲ್ಲಿಯೇ ಹೊರತು ಆರ್ಥಿಕ ಚಲನಶೀಲತೆಯಲ್ಲಲ್ಲ" ಎಂದು ಬರೆದಿದ್ದಾರೆ; ಇಲ್ಲಿ ಚಲನಶೀಲತೆ ಎಂದರೆ ಅದೊಂದು (ನ್ಯೂಟನ್ ಅವರ ಖಗೋಳಶಾಸ್ತ್ರದಲ್ಲಿನ ತಿಳಿವಳಿಕೆಯನ್ನು ಅನುಸರಿಸಿದ) ಹೆಚ್ಚು ಯಾಂತ್ರಿಕವಾದ ದೃಷ್ಟಿಕೋನವೇ ಹೊರತು ವಿಕಾಸವಾದಿ ದೃಷ್ಟಿಕೋನವಲ್ಲ. ಮಾರ್ಷಲ್ ಅವರ ಕೃತಿಗಳಲ್ಲಿನ ವಿಕಾಸವಾದಿ ಅಂಶವು ಇಲ್ಲಿ ಹೆಚ್ಚಿನ ವಿವರಗಳೊಂದಿಗೆ ಚರ್ಚೆಗೆ ಬರದಿರುವುದಕ್ಕೆ ಕಾರಣವೇನೆಂದರೆ ಇಂದಿನ ಮುಖ್ಯವಾಹಿನಿಯ ಅರ್ಥಶಾಸ್ತ್ರವು ಅತ್ಯಂತ ಪ್ರಮುಖವಾದದ್ದು ಎಂದು ಭಾವಿಸಿದ್ದುದು ಯಾಂತ್ರಿಕತೆಯನ್ನೇ ಹೊರತು ಜೀವಶಾಸ್ತ್ರೀಯ ಅಂಶವನ್ನಲ್ಲ.

ಭಾಗಶಃ ಸಮತೋಲನದ ವಿಶ್ಲೇಷಣೆಗೆ ಸಂಬಂಧಿಸಿದಂತೆ ಮಾರ್ಷಲ್ ಅವರಿಗೆ ದೊರೆತಿರುವ ಯಶಸ್ಸಿಗೆ ಅನೇಕ ಕಾರಣಗಳಿವೆ, ಅದರಲ್ಲಿ ಬೇಡಿಕೆ ಮತ್ತು ಪೂರೈಕೆ ಸಿದ್ಧಾಂತವನ್ನು ಬೋಧಿಸುವುದು ಸುಲಭ ಎಂಬುದು ಸಹ ಒಂದು. ಗಣಿತಶಾಸ್ತ್ರದ ಸಹಾಯದೊಂದಿಗೆ ವಿವರಿಸಲು ಸಾಧ್ಯವಾಗುವಂತಹ ಎಲ್ಲ ವಿಷಯಗಳನ್ನೂ ಸಹ (ಚಿತ್ರಗಳೊಂದಿಗೆ) ಮಾತುಗಳಲ್ಲಿ ಅಭಿವ್ಯಕ್ತಿಸಲು ಖಂಡಿತ ಸಾಧ್ಯ, ಇಲ್ಲದಿದ್ದರೆ ಅದು ನಿರುಪಯುಕ್ತ ಎಂದು ಮಾರ್ಷಲ್ ಪ್ರತಿಪಾದಿಸಿದರು. ಇದು ಅವರ ಕೃತಿಗಳನ್ನು ಪ್ರವೇಶಿಸಲು ಸಹಾಯಕವಾಗುತ್ತದೆ. ವಿದ್ಯಾರ್ಥಿಗಳು ಮತ್ತು ವೃತ್ತಿನಿರತರು ಇದನ್ನು ಓದಲು ಸಾಧ್ಯವಾಗಬೇಕು ಎಂದು ಅವರು ಒತ್ತಿ ಹೇಳಿದರು. ಮಾರ್ಷಲ್ ಅವರು (ವಿಶೇಷವಾಗಿ ಜೆವಾನ್ಸ್ ಅವರಿಗಿಂತ ಭಿನ್ನವಾಗಿ) ತಮ್ಮ ಸಿದ್ಧಾಂತವು ಒಂದು ತೀವ್ರಗಾಮಿಯಾದ ಅಥವಾ ಕ್ರಾಂತಿಕಾರಿಯಾದ ಹೊಸ ಸೃಷ್ಟಿ ಎಂದು ಹೇಳದೆ ಅದು ಅಭಿಜಾತ ಸಂಪ್ರದಾಯದ ಮುಂದುವರಿಕೆ ಎನ್ನುವಂತೆ ಅದನ್ನು ಮುಂದಿಟ್ಟರು. ಆದರೆ ಸೂಕ್ಷ್ಮವಾಗಿ ಪರೀಕ್ಷಿಸಿದಲ್ಲಿ ಇದು ಅಭಿಜಾತ ಧೋರಣೆಯಿಂದ ಮೂಲಭೂತವಾಗಿ ಭಿನ್ನವಾಗಿದೆ ಎಂಬುದು ಗೊತ್ತಾಗುತ್ತದೆ. ಆದರೆ ಮೊದಲ ನೋಟಕ್ಕೆ ಬೇಡಿಕೆ ಮತ್ತು ಪೂರೈಕೆಯ ವಕ್ರರೇಖೆಗಳು ತೋರಿಕೆಯವೂ ನೇರಾನೇರ ಆಗಿರುವಂತೆ ಕಂಡುಬಂದರೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅತ್ಯಂತ ಜಟಿಲವಾಗಿ ಕಂಡುಬರುತ್ತವೆ.

**ಭಾಗಶಃ ವಿಶ್ಲೇಷಣೆ**

ಮಾರ್ಷಲ್ ಅವರ ಪ್ರಕಾರ ಅರ್ಥಶಾಸ್ತ್ರವು ಅದರ ಅಧ್ಯಯನ ಕ್ಷೇತ್ರದ ಸಂಕೀರ್ಣತೆಯಿಂದಾಗಿ ನಿಯಂತ್ರಿತ ಪ್ರಯೋಗಗಳಿಗೆ ಒಳಪಡುವುದಿಲ್ಲ (ಪ್ರಾಯೋಗಿಕ ಅರ್ಥಶಾಸ್ತ್ರದ ಪ್ರತಿಪಾದಕರು ಇತ್ತೀಚಿನ ದಿನಗಳಲ್ಲಿ ಈ ಮಿತಿಯನ್ನು ಮೀರುವುದಕ್ಕೆ ಪ್ರಯತ್ನಿಸುತ್ತಿದ್ದಾರೆ; ನೋಡಿರಿ ಅಧ್ಯಾಯ12). ಮಾರ್ಷಲ್ ಅವರು ವಿಶ್ಲೇಷಣೆಯ ಕರ್ತವ್ಯವು, "ತರ್ಕದ ಒಂದು ದೀರ್ಘ ಸರಪಳಿಯನ್ನು ಎರಕ ಹೊಯ್ಯುವುದಲ್ಲ, ಬದಲಿಗೆ ಸರಿಯಾಗಿ ಅನೇಕ ಸಣ್ಣ ಸರಪಳಿಗಳನ್ನು ರಚಿಸುವುದು"

ಎಂದು ಭಾವಿಸಿದರು. ಸಾಮಾನ್ಯ ಸಮತೋಲನ ಸಿದ್ಧಾಂತದ ದೀರ್ಘ ಸರಪಳಿಗೆ ವಿರುದ್ಧವಾಗಿ ರಚಿಸಲ್ಪಟ್ಟ ಈ ವಿಧಾನಾತ್ಮಕ ನಿಲುವು, ಮಾರ್ಷಲ್ ಅವರು ಪ್ರತಿಯೊಂದು ಮಾರುಕಟ್ಟೆಯನ್ನೂ ಪ್ರತ್ಯೇಕವಾಗಿ, ಇತರ ಎಲ್ಲಾ ಸರಕುಗಳು ಮತ್ತು ಉತ್ಪಾದಕ ಸೇವೆಗಳು ದತ್ತವಾದವು ಮತ್ತು ಸ್ಥಿರವಾದವು ಎಂಬ ಪೂರ್ವ ತೀರ್ಮಾನದ ಮೇಲೆ ಅಧ್ಯಯನ ಮಾಡಲು ಪ್ರೇರೇಪಿಸಿತು. ಇದೇ "ಭಾಗಶಃ ಸಮತೋಲನಗಳ ವಿಧಾನ". ಮಾರ್ಷಲ್ ಅವರು ಪರಿಪೂರ್ಣ ಸ್ಪರ್ಧೆಯ ಸಾಧ್ಯತೆಯ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು; ಅದು ಸೀಮಾಂತ ಅರ್ಥಶಾಸ್ತ್ರದ ಚಾಲಕ ಶಕ್ತಿ. ಅವರು ಭಾಗಶಃ ಸಮತೋಲನದ ವಿಧಾನಗಳನ್ನು ಎಲ್ಲಿ ಅನ್ವಯಿಸಬಹುದು ಎಂಬುದನ್ನು ಕುರಿತಂತೆ ಅತ್ಯಂತ ಬಿಗಿಯಾದ ಉಪಾಧಿಗಳನ್ನು ನಿಗದಿ ಮಾಡಿದರು: 1. ಬೇಡಿಕೆ ಮತ್ತು ಪೂರೈಕೆಯ ವಕ್ರ ರೇಖೆಗಳು( ಕರ್ವ್ಸ್) ಒಂದರಿಂದ ಇನ್ನೊಂದು ಸ್ವತಂತ್ರವಾಗಿರುವುದು ಅವಶ್ಯಕ 2. ಬೆಲೆ ಅಥವಾ ಪರಿಮಾಣದಲ್ಲಿ ಸಣ್ಣ ಬದಲಾವಣೆಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವುದು ಮತ್ತು 3. ಯಾವುದಾದರೂ ಬದಲಾವಣೆಯಿಂದ ಉಂಟಾಗುವ ಹೊಂದಾಣಿಕೆಗಳನ್ನು ವೀಕ್ಷಣೆಯಲ್ಲಿರುವ ಮಾರುಕಟ್ಟೆಗೆ ಸೀಮಿತಗೊಳಿಸಿಕೊಳ್ಳಬೇಕು ಮತ್ತು ಅದು ಇತರ ಮಾರುಕಟ್ಟೆಗಳ ಪರಿಸ್ಥಿತಿಗಳ ಮೇಲೆ ಗಮನಾರ್ಹವಾದ ಪ್ರಭಾವವನ್ನು ಉಂಟು ಮಾಡಬಾರದು. ಆದರೆ ಈ ಉಪಾಧಿಗಳನ್ನು ವ್ಯಾಪಕವಾಗಿ ಉಪೇಕ್ಷಿಸಲಾಗಿದೆ ಮತ್ತು ಅದರಿಂದಾಗಿ ಭಾಗಶಃ ಸಮತೋಲನ ವಿಧಾನದ ವಿವರಣಾತ್ಮಕ ಶಕ್ತಿಯನ್ನು ವಿಪರೀತವಾಗಿ ಉತ್ಪ್ರೇಕ್ಷಿಸಿ ಅಂದಾಜು ಮಾಡಲಾಗಿದೆ ಮತ್ತು ಅದರಿಂದ ಪಡೆದುಕೊಳ್ಳಲಾಗುವ ನೀತಿ ಸಂಬಂಧಿ ಶಿಫಾರಸ್ಸುಗಳನ್ನು ಅನಗತ್ಯವಾಗಿ ಅವಲಂಬಿಸಲಾಗಿದೆ.

**ಅವಧಿ ವಿಶ್ಲೇಷಣೆ**

ಮಾರ್ಷಲ್ ಅವರು ಅವಧಿ ವಿಶ್ಲೇಷಣೆಯ ಮಾರ್ಗದ ಮೂಲಕ, ಉತ್ಪಾದಿಸಲ್ಪಟ್ಟ ಬೆಲೆಗಳು ಮತ್ತು ಪರಿಮಾಣಗಳನ್ನು ನಿರ್ಣಯಿಸುವ ಸಮಸ್ಯೆಯ ಕುರಿತು ಅಧ್ಯಯನ ಮಾಡಿದರು. ಅತಿ ಅಲ್ಪಾವಧಿಯ ಪರಿಗಣನೆಯಲ್ಲಿ (ಮೀನು ಮಾರುಕಟ್ಟೆಯಲ್ಲಿ ಒಂದು ದಿನ ಎಂದುಕೊಳ್ಳಿ) ಪೂರೈಕೆ ನಿಗದಿತವಾಗಿದ್ದು, ಬೇಡಿಕೆಯು ಮಾರುಕಟ್ಟೆಯ ಬೆಲೆಯನ್ನು ನಿರ್ಧರಿಸುತ್ತದೆ. ಅಲ್ಪಾವಧಿಯಲ್ಲಿ (ಮೀನು ಮಾರುಕಟ್ಟೆಯಲ್ಲಿ ಒಂದು ವಾರ ಎಂದುಕೊಳ್ಳಿ) ಕೆಲವೊಂದು ಮಿತಿಗಳ ಒಳಗೆ, ಯಂತ್ರಗಳನ್ನು ಯಾವ ಸಾಮರ್ಥ್ಯದಲ್ಲಿ ಉಪಯೋಗಿಸಬಹುದು, ಎಷ್ಟು ತೀವ್ರವಾಗಿ ಕೆಲಸ ಮಾಡಿಸಬಹುದು (ಅಥವಾ ದೋಣಿ ಮತ್ತು ಅದರಲ್ಲಿನ ಕೆಲಸಗಾರರು ಮೀನು ಹಿಡಿಯುವುದಕ್ಕೆ ಎಷ್ಟು ಸಮಯ ತಗುಲಬಹುದು) ಇವುಗಳನ್ನು ಬದಲಾಯಿಸುವ ಮೂಲಕ ಪೂರೈಕೆಯಲ್ಲಿ ವ್ಯತ್ಯಯ ಮಾಡಬಹುದು; ಹೀಗಾದಾಗ ಅಲ್ಪಾವಧಿಯ ಸಾಧಾರಣ ಬೆಲೆಯ ಮೇಲೆ ಬೇಡಿಕೆ ಮತ್ತು ಪೂರೈಕೆ ಎರಡೂ ಸಹ ಪ್ರಭಾವ ಬೀರುತ್ತವೆ. ದೀರ್ಘಾವಧಿ ಪರಿಗಣನೆಯಲ್ಲಿ ಉತ್ಪಾದನಾ ಸಾಧನ ಮತ್ತು ಉದ್ಯೋಗವನ್ನು ಬದಲಾವಣೆಗೆ ಒಳಪಡಿಸಬಹುದು (ಮೀನುಗಾರಿಕೆಯ ಉದಾಹರಣೆ ತೆಗೆದುಕೊಂಡರೆ ದೋಣಿಗಳ ಸಂಖ್ಯೆ ಮತ್ತು ಸಿಬ್ಬಂದಿಯನ್ನು ಬದಲಾಯಿಸುವ ಮೂಲಕ) ಮತ್ತು ಮಾರುಕಟ್ಟೆಯಲ್ಲಿರುವ ಉದ್ದಿಮೆಗಳು ಸಹ ಬದಲಾಗಬಹುದು (ಎಂದರೆ ಹೊಸ ಉದ್ದಿಮೆಗಳು ಮೀನುಗಾರಿಕೆಗೆ ಪ್ರವೇಶಿಸಬಹುದು ಅಥವಾ ಹೊರ ಹೋಗಬಹುದು). ಆದ್ದರಿಂದ ದೀರ್ಘಾವಧಿಯ ಸಾಧಾರಣ ಬೆಲೆಯನ್ನು ನಿರ್ಣಯಿಸುವಾಗ ಬೇಡಿಕೆಗೆ ಹೋಲಿಸಿದರೆ ಪೂರೈಕೆ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ದೀರ್ಘಾವಧಿ ಪರಿಗಣನೆಯಲ್ಲಿ ಅಥವಾ ಲೌಕಿಕ ದೃಷ್ಟಿಕೋನದಲ್ಲಿ ತಾಂತ್ರಿಕ ಹಾಗೂ ಸಂಘಟನಾತ್ಮಕ ಬದಲಾವಣೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ, ಎಂದರೆ ಬಂಡವಾಳ ಸರಕುಗಳೊಳಗೆ ಹೊಸ ಜ್ಞಾನವನ್ನು ಸೇರಿಸಿಕೊಳ್ಳಬೇಕಾಗುತ್ತದೆ ಮತ್ತು ಬೇಡಿಕೆ ಮತ್ತು ಪೂರೈಕೆಯ ಏಕಕಾಲೀನ ಬದಲಾವಣೆಯ ಹಾದಿಯಲ್ಲಿ ಶ್ರಮವು ಬೆಲೆಯನ್ನು ನಿರ್ಧರಿಸುತ್ತದೆ (ಮೀನುಗಾರಿಕೆಯ ಉದಾಹರಣೆಯಲ್ಲಿ,ಮೀನು ಹಿಡಿಯಲು ಜಲಾಂತರ ಶಬ್ದಶೋಧಕ ಉಪಕರಣ ಬಳಸುವುದು).


ದೀರ್ಘಾವಧಿ ಸಾಧಾರಣ ಬೆಲೆಯ ಕುರಿತಾದ ಮಾರ್ಷಲ್‌ರವರ ಪರಿಕಲ್ಪನೆಯು ಉತ್ಪಾದನಾ ಬೆಲೆಯ ಕುರಿತಾದ ಅಭಿಜಾತ ಪರಿಕಲ್ಪನೆಯೊಂದಿಗೆ ಬಲವಾದ ಸಾಮ್ಯತೆಯನ್ನು ಹೊಂದಿದೆ ಮತ್ತು ಅಭಿಜಾತ ಅರ್ಥಶಾಸ್ತ್ರಜ್ಞರ ಹಾಗೆ ಇವರೂ ಸಹ ಸ್ಪರ್ಧಾತ್ಮಕ ಪರಿಸ್ಥಿತಿಗಳಲ್ಲಿ ಬಂಡವಾಳಕ್ಕೆ ಏಕಪ್ರಕಾರವಾಗಿ ಪ್ರತಿಫಲವು ದೊರಕುತ್ತದೆ ಎಂದು ಪ್ರತಿಪಾದಿಸಿದರು. ಉತ್ಪಾದನೆಯ ಭಾಗವನ್ನು ಅಭಿವೃದ್ಧಿಪಡಿಸುವುದರಲ್ಲಿ ಅಭಿಜಾತ ಅರ್ಥಶಾಸ್ತ್ರಜ್ಞರು ಒಳ್ಳೆಯ ಸಾಧನೆಯನ್ನು ಮಾಡಿದರು ಎಂದು ಒಪ್ಪಿಕೊಳ್ಳುತ್ತಲೇ ಮಾರ್ಷಲ್ ಅವರು ಬೇಡಿಕೆಗೆ ಸಂಬಂಧಿಸಿದಂತೆ ಉಪೇಕ್ಷೆ ತೋರಿಸಿದರು ಎಂದು ಆಪಾದಿಸುತ್ತಾ, ಅದೊಂದು ದೋಷ ಎಂದರು. "ಕತ್ತರಿಯ ಎರಡು ಅಲಗುಗಳು" ಎಂಬ ಸುಪ್ರಸಿದ್ಧ ರೂಪಕವನ್ನು ಮುಂದಿಡುತ್ತಾ ಅವರು ಬೆಲೆಯನ್ನು ನಿರ್ಧರಿಸುವಲ್ಲಿ ಬೇಡಿಕೆ ಮತ್ತು ಪೂರೈಕೆ ಎರಡೂ ಅಗತ್ಯ ಎಂದರು.

ಮಾರ್ಷಲ್ ಅವರ ಕಲ್ಪನೆಯನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ನಾವು ಅಲ್ಪಾವಧಿಯ ಒಂದು ಉದ್ದಿಮೆಯನ್ನು ಪರಿಗಣನೆಗೆ ತೆಗೆದುಕೊಳ್ಳೋಣ. ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಗಳಲ್ಲಿ ಅದಕ್ಕೆ ಯಾವುದೇ ಮಾರುಕಟ್ಟೆ ಶಕ್ತಿಯು ಇರುವುದಿಲ್ಲ ಮತ್ತು ಅದು ಮಾರುಕಟ್ಟೆಯಲ್ಲಿ ದಕ್ಕುವ ಬೆಲೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಉತ್ಪನ್ನ ಮತ್ತು ಉತ್ಪನ್ನದ ಒಂದು ಘಟಕಕ್ಕೆ ಸಂಬಂಧಿಸಿದಂತೆ ಉದ್ದಿಮೆಯು ಸೀಮಾಂತ ವೆಚ್ಚ ಬಿಂಬಕಕ್ಕೆ (ಘಟಕ ವೆಚ್ಚಕ್ಕೆ ;ಕಾಸ್ಟ್ ಫಂಕ್ಷನ್ ಗೆ) ಅದು ಮುಖಾಮುಖಿಯಾಗುತ್ತದೆ. ಉತ್ಪನ್ನವು ಹೆಚ್ಚಾದಂತೆ ವೆಚ್ಚವು ಖಚಿತವಾಗಿ ಹೆಚ್ಚಾಗುತ್ತದೆ: ಪ್ರತಿಯೊಂದು ಘಟಕದ ಉತ್ಪಾದನಾ ವೆಚ್ಚವು ಹಿಂದಿನ ಘಟಕದ ಉತ್ಪಾದನೆಗಿಂತ ದುಬಾರಿಯಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಅಲ್ಪಾವಧಿಯಲ್ಲಿ ಉದ್ದಿಮೆಗೆ ನಿರ್ದಿಷ್ಟ ನಿಗದಿತ ಉತ್ಪಾದನಾ ಅಂಶಗಳ ಮಿತಿ ಇರುತ್ತದೆ; ಉದಾಹರಣೆಗೆ ಕಾರ್ಖಾನೆಯ ಸಾಧನಗಳು, ಕಾರ್ಮಿಕ ಪಡೆ ಇವೆಲ್ಲವೂ ನಿಗದಿತವಾಗಿರುತ್ತವೆ. ಕೆಲವೇ ಅಂಶಗಳು ಮಾತ್ರ ಬದಲಾಗುತ್ತವೆ ಉದಾಹರಣೆಗೆ, ಉಪಯೋಗಿಸಲ್ಪಡುವ ಕಚ್ಚಾ ವಸ್ತುಗಳ ಪರಿಮಾಣ ಮತ್ತು ಉಪಯೋಗಿಸಲ್ಪಡುವ ಶಕ್ತಿ. ಉತ್ಪಾದನೆಯ ಮಟ್ಟ ಹೆಚ್ಚಿದಂತೆ ಸಾಪೇಕ್ಷ ಕೊರತೆಯಲ್ಲಿರುವ ನಿಗದಿತ ಅಂಶಗಳು ಪ್ರತಿಯೊಂದು ಘಟಕದ ಉತ್ಪಾದನೆಯ ಬೆಲೆ ಹೆಚ್ಚುವುದಕ್ಕೆ ಕಾರಣವಾಗುತ್ತವೆ; ಎಂದರೆ ಸೀಮಾಂತ ವೆಚ್ಚ ಹೆಚ್ಚುವುದಕ್ಕೆ ಕಾರಣವಾಗುತ್ತದೆ. (ಕಾರ್ಮಿಕರು ಸುಸ್ತಾಗುತ್ತಿದ್ದಂತೆ ಮಾರಲಾಗದ ಉತ್ಪನ್ನದ ಭಾಗ ಅಥವಾ ತ್ಯಾಜ್ಯ ಹೆಚ್ಚಾಗುತ್ತಾ ಹೋಗಬಹುದು). ಸೀಮಾಂತ ವೆಚ್ಚಗಳು ಬೆಲೆಗೆ ಸಮವಾಗುವ ಉತ್ಪಾದನಾ ಗಾತ್ರದಲ್ಲಿ ಉದ್ದಿಮೆಯು ತನ್ನ ಲಾಭಗಳನ್ನು ಗರಿಷ್ಠ ಮಟ್ಟಕ್ಕೇರಿಸಿಕೊಂಡಿದೆ ಎಂದು ಭಾವಿಸಬಹುದು. ಇತರ ಎಲ್ಲಾ ಅಂಶಗಳು ಸಮವಾಗಿರುವಾಗ ಬೆಲೆಯು ಹೆಚ್ಚಾಗಿದ್ದರೆ ಉದ್ದಿಮೆಯು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಮಾಡುತ್ತದೆ. ಉದ್ದಿಮೆಗೆ ಸಂಬಂಧಿಸಿದಂತೆ ಇದು ಪೂರೈಕೆ ಬಿಂಬಕ (ಸಪ್ಲೈ ಫಂಕ್ಷನ್) ಪರಿಕಲ್ಪನೆಗೆ ಎಡೆ ಮಾಡಿಕೊಡುತ್ತದೆ. ಇದು ಉದ್ದಿಮೆಯ ಸೀಮಾಂತ ವೆಚ್ಚ ಬಿಂಬಕಕ್ಕೆ ಸಮನಾಗಿರುತ್ತದೆ (ಚರ ವೆಚ್ಚಗಳ ಕನಿಷ್ಠ ಸರಾಸರಿಗಿಂತ ಮೇಲಿರುತ್ತದೆ). ಅಲ್ಪಾವಧಿಯಲ್ಲಿ ಉದ್ದಿಮೆಗಳ ಸಂಖ್ಯೆಯು ಅದೇ ಮಟ್ಟದಲ್ಲಿರುತ್ತದೆ ಎಂದು ಭಾವಿಸುವುದರಿಂದ ಮಾರ್ಷಲ್ ಅವರು ಉದ್ದಿಮೆ; ನಿರ್ದಿಷ್ಟ ಪೂರೈಕೆ ಕಾರ್ಯಸೂತ್ರಗಳನ್ನು ಒಟ್ಟಿಗೆ ಸೇರಿಸುತ್ತಾರೆ ಮತ್ತು ಪ್ರಸ್ತುತದಲ್ಲಿರುವ ಸರಕನ್ನು ಉತ್ಪಾದಿಸುವ ಇಡೀ ಕೈಗಾರಿಕೆಗೆ ಪೂರೈಕೆ ವಕ್ರ ರೇಖೆಯನ್ನು (ಸಪ್ಲೈ ಕರ್ವ್) ನಿರ್ಧರಿಸುತ್ತಾರೆ.

ತತ್ಸಂಬಂಧಿಯಾದ ಬೇಡಿಕೆಯ ವಕ್ರರೇಖೆಯನ್ನು ರಚಿಸುವುದಕ್ಕೆ ಸಂಬಂಧಿಸಿದಂತೆ ಇರುವ ತರ್ಕವು ಕೆಳಗಿನಂತಿದೆ. ವ್ಯಕ್ತಿಗಳಿಗೆ ನಿರ್ದಿಷ್ಟವಾದ ಅವಶ್ಯಕತೆಗಳು ಮತ್ತು ಬಯಕೆಗಳು ಇದ್ದು ಅವರು ಅದನ್ನು ಬೇರೆ ಬೇರೆ ಸರಕುಗಳನ್ನು ಒಟ್ಟಿಗೆ ಸೇರಿಸಿಕೊಂಡು ಅವುಗಳ ಸಂಯೋಜನೆಯಿಂದ ತೃಪ್ತಿಪಟ್ಟುಕೊಳ್ಳಬಲ್ಲರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ವಸ್ತುವಿಗೆ ಬದಲಿಯಾಗಿ ಮತ್ತೊಂದು ವಸ್ತುವನ್ನು ಉಪಯೋಗಿಸುವ ಸಾಧ್ಯತೆ ಇರುತ್ತದೆ ಮತ್ತು ಅದರಿಂದಲೂ ಸಹ ಅದೇ ಉಪಯುಕ್ತತೆ ಮತ್ತು ತೃಪ್ತಿಯನ್ನು ಪಡೆದುಕೊಳ್ಳಲಾಗುತ್ತದೆ. ಉದಾಹರಣೆಗೆ ಅಕ್ಕಿಯ ಬದಲು ಆಲೂಗಡ್ಡೆಗಳನ್ನು ಅಥವಾ ಆಲೂಗೆಡ್ಡೆಯ ಬದಲು ಅಕ್ಕಿಯನ್ನು ಬಳಸಬಹುದು. ಒಂದನ್ನು ಬಿಟ್ಟು ಉಳಿದ ಎಲ್ಲಾ ಸರಕುಗಳ

ನಿರ್ದಿಷ್ಟ ಬೆಲೆಗೆ ಸಂಬಂಧಿಸಿದಂತೆ ಒಂದಾನೊಂದು ಸರಕಿನ ಬೆಲೆಯು ಹೆಚ್ಚಾದರೆ ಅಥವಾ ಕಡಿಮೆಯಾದರೆ ಆಗ ಸಹಜವಾಗಿಯೇ (ಖಚಿತವಾಗಿ ಅಲ್ಲ) ವ್ಯಕ್ತಿಯು ಆ ಸರಕನ್ನು ಕಡಿಮೆ ಅಥವಾ ಹೆಚ್ಚು ಬಳಸುತ್ತಾನೆ. ಇದು ಬಳಕೆದಾರನ ಬೇಡಿಕೆ ಬಿಂಬಕ (ಡಿಮಾಂಡ್ ಫಂಕ್ಷನ್) ಪರಿಕಲ್ಪನೆಗೆ ಎಡೆ ಮಾಡಿಕೊಡುತ್ತದೆ; ಇದು ಎಲ್ಲಾ ಸರಕುಗಳ ಬೆಲೆ (ಮತ್ತು ಬಳಕೆದಾರನ ಆದಾಯ) ಸ್ಥಿರ ಎಂದುಕೊಂಡಾಗ ಕಂಡು ಬರುವ ಬೇಡಿಕೆಯ ಪ್ರಮಾಣ ಮತ್ತು ಪರಿಗಣನೆಯಲ್ಲಿರುವ ಸರಕಿನ ಬೆಲೆಯ ಪರ್ಯಾಯ ಹಂತಗಳೊಂದಿಗೆ ಸಂಬಂಧ ಹೊಂದಿರುತ್ತದೆ. ಸರಕಿಗೆ ಸಂಬಂಧಿಸಿದಂತೆ ಎಲ್ಲಾ ಬಳಕೆದಾರರ ಬೇಡಿಕೆ ಬಿಂಬಕಗಳನ್ನು ಒಟ್ಟಿಗೆ ಸೇರಿಸುವುದರಿಂದ ಸಾಮೂಹಿಕ ಬೇಡಿಕೆ ಬಿಂಬಕ ಲಭ್ಯವಾಗುತ್ತದೆ. ಸರಕಿನ ಬೆಲೆಯು ಕಡಿಮೆಯಾದರೆ ಬೇಡಿಕೆಯ ಪರಿಮಾಣವು ಹೆಚ್ಚಾಗುತ್ತದೆ ಎಂದು ಸಾಮಾನ್ಯವಾಗಿ (ಆದರೆ ಅವಶ್ಯವಾಗಿ ಅಲ್ಲ) ಭಾವಿಸಲಾಗುತ್ತದೆ.

ಮಾರ್ಷಲ್‌ರವರು ನಂತರ ಸಾಮೂಹಿಕ ಪೂರೈಕೆ ವಕ್ರ ರೇಖೆ ಮತ್ತು ಸಾಮೂಹಿಕ ಬೇಡಿಕೆ ವಕ್ರ ರೇಖೆ ಇವುಗಳನ್ನು ಮುಖಾಮುಖಿಯಾಗಿಸಿ, ಎರಡು ವಕ್ರ ರೇಖೆಗಳು ಒಂದನ್ನೊಂದು ಛೇದಿಸುವ ಕಡೆಯಲ್ಲಿ ಸಮತೋಲನ ಬೆಲೆ ಮತ್ತು ಸಮತೋಲನ ಪರಿಮಾಣವನ್ನು ಗುರುತಿಸುತ್ತಾರೆ. ಚಿತ್ರ 5.1 ರಲ್ಲಿ ಪರಿಮಾಣವನ್ನು X ಅಕ್ಷರೇಖೆಯಲ್ಲೂ ಮತ್ತು ಬೆಲೆಯನ್ನು Y ಅಕ್ಷರೇಖೆಯಲ್ಲೂ ಇಂದಿನ ಸಂಪ್ರದಾಯದಂತೆ ಎಳೆಯಲಾಗಿದೆ. ನಾನು ಇಲ್ಲಿ ಮಾರ್ಷಲ್ ಅವರ 2 ನೇ ಉಪಾಧಿಯನ್ನು ಅನುಸರಿಸಿ ಬೆಲೆ ಮತ್ತು ಪರಿಮಾಣದಲ್ಲಿ ಆಗುವ ಸಣ್ಣಪುಟ್ಟ ಬದಲಾವಣೆಗೆ ಮಾತ್ರ ಪೂರೈಕೆ ಮತ್ತು ಬೇಡಿಕೆ ವಕ್ರ ರೇಖೆಗಳನ್ನು ಎಳೆದಿದ್ದೇನೆ. ಪಠ್ಯಪುಸ್ತಕಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವುದು ಬೃಹತ್ ಬೆಲೆ ಬದಲಾವಣೆಗಳಿಗೆ (ಪರಿಮಾಣ ಬದಲಾವಣೆ ಸಹ) ಕುರಿತಾದ ವಕ್ರರೇಖೆಗಳನ್ನು; ಉದಾಹರಣೆಗೆ ಒಂದು ಡಾಲರ್ ನಿಂದ 1000 ಡಾಲರ್ ವರೆಗೂ ಆಗುವ ಬದಲಾವಣೆ. ಆದರೆ ನಿಜಕ್ಕೂ ಹಾಗೇನಾದರೂ ಭಾರತದಲ್ಲಿ ಅಕ್ಕಿಯ ಬೆಲೆಯು ಇಂದಿನ ಬೆಲೆಯ 50 ಪಟ್ಟು ಹೆಚ್ಚಾದರೆ ಆಗ ನಾವು ಸಮತೋಲನ ವಿಶ್ಲೇಷಣೆಯನ್ನು ಮರೆತು ಬಿಟ್ಟು ರಾಜಕೀಯ ಅಶಾಂತಿ ಮತ್ತು ಕ್ರಾಂತಿಯ ಸಿದ್ಧಾಂತದ ಕಡೆಗೆ ನೋಡಬೇಕಾಗುತ್ತದೆ.




ಚಿತ್ರ 5.1 ಮಾರ್ಷಲ್ ವಕ್ರರೇಖೆ

ದೀರ್ಘಾವಧಿ ವಿಶ್ಲೇಷಣೆಯು, ಕೆಲವೊಂದು ಅಸ್ತಿತ್ವದಲ್ಲಿರುವ ಉದ್ದಿಮೆಗಳು ಮಾರುಕಟ್ಟೆಯನ್ನು ತೊರೆಯಬಹುದು ಮತ್ತು ಹೊಸ ಉದ್ದಿಮೆಗಳು ಪ್ರವೇಶ ಮಾಡಬಹುದು ಹಾಗೂ ಒಟ್ಟಾರೆ ಉದ್ದಿಮೆಗಳ ಸಂಖ್ಯೆ ಮತ್ತು ಆ ಕೈಗಾರಿಕಾ ವಲಯದ ಉತ್ಪಾದನಾ ಸಾಮರ್ಥ್ಯವು ಬದಲಾಗಬಹುದು ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸರಾಸರಿ ಬೆಲೆಗಳ ಕನಿಷ್ಠ ಮಟ್ಟಕ್ಕಿಂತ ಬೆಲೆಯು ಹೆಚ್ಚಾದಲ್ಲಿ ಆಗ ಮಾರುಕಟ್ಟೆಯಲ್ಲಿರುವ ಉದ್ದಿಮೆಗಳು ಹೆಚ್ಚುವರಿ ಲಾಭವನ್ನು ಪಡೆದುಕೊಳ್ಳುತ್ತವೆ. ಆಗ ಅದು ಇನ್ನಷ್ಟು ಉದ್ದಿಮೆಗಳನ್ನು ಆಕರ್ಷಿಸುತ್ತದೆ. ಇದು ತಿರುವು ಮುರುವಾದರೆ ಮಾರುಕಟ್ಟೆಯಲ್ಲಿರುವ ಉದ್ದಿಮೆಗಳು ನಷ್ಟವನ್ನು ಅನುಭವಿಸಿ ಹೊರಗೆ ನಡೆಯುತ್ತವೆ. ಉದ್ದಿಮೆಗೆ ಸಮತೋಲನ ಬೆಲೆಯಾಗಬಲ್ಲ ಏಕೈಕ ಬೆಲೆಯು ಸರಾಸರಿ ಬೆಲೆಗಳ ದೀರ್ಘಾವಧಿ ಕನಿಷ್ಠತಮ ಬೆಲೆಗೆ ಸಮನಾಗಿರುತ್ತದೆ.

ಒಂದು ಕಾರ್ಖಾನೆಯ ದೀರ್ಘಾವಧಿ ಸಮತೋಲನವು ಹೇಗೆ ಕಾಣಿಸಬಹುದು? ಇದು ಆ ಕೈಗಾರಿಕಾ ವಲಯದಲ್ಲಿ ನಡೆಯುವ ಉತ್ಪಾದನಾ ಪ್ರಮಾಣದ ಬದಲಾವಣೆಯೊಂದಿಗೆ ಯಾವ ರೀತಿಯಲ್ಲಿ ಉತ್ಪಾದನಾ ವೆಚ್ಚಗಳು ಬದಲಾಗುತ್ತಾ ಹೋಗುತ್ತವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ದೀರ್ಘಾವಧಿಯಲ್ಲಿ, ಸಾಮಾನ್ಯವಾಗಿ ಎಲ್ಲ ಉತ್ಪಾದನಾ ಅಂಶಗಳು ಸಹ ಬದಲಾಗುವಂಥವೇ; ಸ್ಥಿರ ಅಂಶಗಳು ಇರುವುದಿಲ್ಲ. ಉದಾಹರಣೆಗೆ, ಅಲ್ಪಾವಧಿಯಲ್ಲಿ ಒಂದು ಉದ್ದಿಮೆಗೆ ಆ ಕಾರ್ಖಾನೆಯ ಗಾತ್ರ, ಅಲ್ಲಿನ ಉತ್ಪಾದನಾ ಸಾಧನಗಳು ಮತ್ತು ಕೌಶಲ ಹೊಂದಿರುವ ಕಾರ್ಮಿಕರ ಸಂಖ್ಯೆ ಇವುಗಳ ಮಿತಿ ಇರಬಹುದು. ಆದರೆ ದೀರ್ಘಾವಧಿಯಲ್ಲಿ ಅದು ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವುದರ ಮೂಲಕ (ಕಡಿತಗೊಳಿಸುವ ಮೂಲಕ) ಮೊದಲಿನ ಅಂಶಗಳನ್ನು ಹೆಚ್ಚಿಸಬಹುದು ಅಥವಾ ಕುಗ್ಗಿಸಬಹುದು ಹಾಗೂ ಹೆಚ್ಚಿನ (ಅಥವಾ ಕಡಿಮೆ) ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಮೂಲಕ ಸಹ ಬದಲಾಯಿಸಬಹುದು. ಹೀಗಾಗಿ ದೀರ್ಘ ಕಾಲಾವಧಿಯಲ್ಲಿ ಉದ್ದಿಮೆಗಳು ತಾವು ಮಾರುಕಟ್ಟೆಗೆ ಯಾವ ಪರಿಮಾಣದಲ್ಲಿ ಸರಕುಗಳನ್ನು ತರಬೇಕೆಂದು

ಇಚ್ಚಿಸುತ್ತವೆಯೋ ಅದಕ್ಕೆ ಅನುಗುಣವಾಗಿ ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಹಾಗಾದರೆ ಏಳುವ ಪ್ರಶ್ನೆಯೇನೆಂದರೆ, ಒಂದು ಉದ್ದಿಮೆಯು ಸ್ಥಿರವಾಗಿ ಏರುತ್ತಿರುವ ಅಥವಾ ಇಳಿಯುತ್ತಿರುವ ಪ್ರತಿಫಲದ ಪ್ರಮಾಣದಲ್ಲಿ (ರಿಟರ್ನ್ಸ್ ಟು ಸ್ಕೇಲ್) ಕೆಲಸ ಮಾಡುತ್ತಿದೆಯೇ ಎಂಬುದು. ಈ ಮೂಲಕ ಅರ್ಥಶಾಸ್ತ್ರಜ್ಞರು ಹೇಳುವುದೇನೆಂದರೆ, ಉತ್ಪಾದನೆಯ ಪ್ರಮಾಣದ ಏರುವಿಕೆಯು ವಿಭಿನ್ನ ಒಳಸುರಿಗಳನ್ನು ಹೆಚ್ಚು ಮಾಡಿದುದಕ್ಕೆ ತಕ್ಕ ಅನುಪಾತದಲ್ಲಿ ಇರುತ್ತದೆಯೋ ಅಥವಾ ಹೆಚ್ಚಿನ ಅನುಪಾತದಲ್ಲಿ ಇರುತ್ತದೆಯೋ ಅಥವಾ ಕಡಿಮೆ ಅನುಪಾತದಲ್ಲಿ ಇರುತ್ತದೆಯೋ ಎಂಬುದನ್ನು. ಒಂದು ನಿರ್ದಿಷ್ಟ ಒಳಸುರಿ ಬೆಲೆಗೆ ಅನುಗುಣವಾಗಿ ಇದು ಸ್ಥಿರವಾಗಿರುವ, ಏರುತ್ತಿರುವ ಅಥವಾ ಇಳಿಯುತ್ತಿರುವ ಘಟಕ ವೆಚ್ಚವಾಗಿ ಪರಿವರ್ತಿತವಾಗುತ್ತದೆ.

ಉತ್ಪಾದನಾ ಗಾತ್ರವನ್ನು ಅವಲಂಬಿಸದೆ ಪ್ರತಿ ಘಟಕ ವೆಚ್ಚವು ಸ್ಥಿರವಾಗಿರುವಾಗ ಮಾತ್ರ ದೀರ್ಘಾವಧಿ ಪೂರೈಕೆ ವಕ್ರ ರೇಖೆಯು ಪರಿಮಾಣ ಕಕ್ಷೆಗೆ ಸಮಾನಾಂತರವಾದ ಸರಳ ರೇಖೆಯಾಗುತ್ತದೆ. ಆಗ ಬೇಡಿಕೆಯು ಉದ್ದಿಮೆಯು ಉತ್ಪಾದಿಸುವ ಗಾತ್ರವನ್ನು ಮಾತ್ರ ನಿರ್ಣಯಿಸುತ್ತದೆ ಆದರೆ ಬೆಲೆಯನ್ನಲ್ಲ, ಅದು ವೆಚ್ಚದಿಂದ ನಿರ್ಣಯವಾಗುತ್ತದೆ. ಸೀಮಾಂತ ಮತ್ತು ಸರಾಸರಿ ವೆಚ್ಚಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಎಲ್ಲಾ ಅಂಶಗಳು ಸಹ ಬದಲಾಗುವಂಥವು; ಚರ ಅಂಶಗಳು; ಎಂಬ ಪೂರ್ವ ತೀರ್ಮಾನವು ಅನ್ವಯಿಸುವುದಿಲ್ಲ. ಉದಾಹರಣೆಗೆ ಆ ಉದ್ದಿಮೆಯು ಬಹಳ ಕಡಿಮೆ ಸ್ಥಳಾವಕಾಶವಿರುವ ವಿಶಿಷ್ಟ ಮಾದರಿಯ ಜಾಗವನ್ನು ಉಪಯೋಗಿಸುತ್ತಿರಬಹುದು, ಆದರೆ ಉದ್ದಿಮೆಯ ಉತ್ಪನ್ನವು ಬೆಳೆಯುತ್ತಾ ಹೋದಂತೆ, ಹೆಚ್ಚುತ್ತಾ ಹೋಗುವ, ಸಾಪೇಕ್ಷವಾಗಿ ಕೊರತೆಯಲ್ಲಿರುವ ಜಾಗದ ವೆಚ್ಚವು ಜಾಗದ ಮಾಲೀಕರಿಗೆ ಕೊಡಲಾಗುವ ಹೆಚ್ಚಿನ ಬಾಡಿಗೆಯಲ್ಲಿ ಪ್ರತಿಬಿಂಬಿತವಾಗುತ್ತದೆ (ಆಗ ಅದು ಎಲ್ಲ ಸರಕುಗಳು ಮತ್ತು ಒಳಸುರಿಗಳ ಬೆಲೆಗಳು ಸ್ಥಿರವಾಗಿರುತ್ತವೆ ಎಂಬ ಪೂರ್ವ ತೀರ್ಮಾನವನ್ನು ಅಲ್ಲಗಳೆಯುತ್ತದೆ). ಏರುತ್ತಿರುವ ಉತ್ಪಾದನಾ ಪ್ರಮಾಣದಲ್ಲಿ, ಸೀಮಾಂತ ಮತ್ತು ಸರಾಸರಿ ವೆಚ್ಚಗಳು ಕುಸಿಯುವ ಸಂದರ್ಭದಲ್ಲಿ ಮಾರ್ಷಲ್ ಅವರು, ಉದ್ದಿಮೆಯ ಆಂತರಿಕ ಮತ್ತು ಬಾಹ್ಯ ಪ್ರಮಾಣದ ಆರ್ಥಿಕತೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸುತ್ತಾರೆ. ಮೊದಲಿನ ರೀತಿಯ ಪ್ರಕರಣಗಳಲ್ಲಿ ಆರ್ಥಿಕತೆಗಳು ಒಂದು ಏಕೈಕ ಉದ್ದಿಮೆಗೆ ಅನ್ವಯಿಸುತ್ತವೆ ಮತ್ತು ಇಡಿಯ ಕೈಗಾರಿಕೋದ್ಯಮಕ್ಕೆ ಅಲ್ಲ. ಆದರೆ ಎರಡನೆಯ ಪ್ರಕರಣದಲ್ಲಿ ಅವು ಏಕಕಾಲದಲ್ಲಿ ಕೈಗಾರಿಕೋದ್ಯಮದ ಒಳಗಿರುವ ಎಲ್ಲಾ ಉದ್ದಿಮೆಗಳಿಗೂ ಅನ್ವಯಿಸುತ್ತವೆ. ಎಂದರೆ ಬೃಹತ್ತಾದ ಉತ್ಪಾದನಾ ಮಟ್ಟದಿಂದಾಗಿ ಇಡಿಯ ಕೈಗಾರಿಕೋದ್ಯಮಕ್ಕೇ ಅನುಕೂಲವಾಗುತ್ತದೆ. ಆರ್ಥಿಕತೆಯು ಉದ್ದಿಮೆಗೆ ಆಂತರಿಕವಾಗಿರುವ ಸಂದರ್ಭದಲ್ಲಿ ಏಕಸ್ವಾಮ್ಯವು ಸೃಷ್ಟಿಯಾಗುತ್ತದೆ. ಏಕೆಂದರೆ ಅತಿ ಹೆಚ್ಚು ಉತ್ಪಾದನೆಯನ್ನು ಮಾಡುವ ಉದ್ದಿಮೆಗೆ ತನ್ನ ಪ್ರತಿಸ್ಪರ್ಧಿಗಳಿಗೆ ಇಲ್ಲದಿರುವ ಕಡಿಮೆ ವೆಚ್ಚದ ಅನುಕೂಲವು ಇರುತ್ತದೆ ಮತ್ತು ಅದು ಮಾರುಕಟ್ಟೆಯಿಂದ ಉಳಿದವರನ್ನು ಹೊರಗೆ ದೂಡುತ್ತದೆ. ಉದ್ದಿಮೆಯ ಉತ್ಪಾದನೆಯು ಬೃಹತ್ತಾದಷ್ಟೂ ಸಹ, ಉತ್ಪನ್ನದ ಪ್ರತಿಯೊಂದು ಘಟಕಕ್ಕೆ ತಗಲುವ ವೆಚ್ಚವು ಕಡಿಮೆಯಾಗುತ್ತದೆ ಮತ್ತು ತನ್ನ ಪ್ರತಿಸ್ಪರ್ಧಿಗಳನ್ನು ಸೋಲಿಸಲು ಅವರಿಗಿಂತ ಮಾರಾಟದ ಬೆಲೆಯನ್ನು ಕಡಿಮೆ ಮಾಡಬಲ್ಲ ಸಾಮರ್ಥ್ಯವು ಅದಕ್ಕೆ ಹೆಚ್ಚಾಗುತ್ತದೆ.

ಈ ಸನ್ನಿವೇಶವು ಸ್ಪರ್ಧಾತ್ಮಕ ಆರ್ಥಿಕತೆಯಲ್ಲಿನ ಸಮತೋಲನ ಕುರಿತಾದ ಮಾರ್ಷಲ್ ಅವರ ವಿಶ್ಲೇಷಣೆಯ ಹಿಡಿತಕ್ಕೆ ಸಿಗುವುದಿಲ್ಲ. ಅವರ ಸಿದ್ಧಾಂತದ ವ್ಯಾಪ್ತಿಗೆ ದಕ್ಕುವುದು ಕೇವಲ ಕೈಗಾರಿಕಾ ವಲಯಕ್ಕೆ ಅಂತರಿಕವಾದ ಆದರೆ ಒಂದು ಉದ್ಯಮಕ್ಕೆ ಮಾತ್ರ ಹೊರತಾಗಿರುವ ಆರ್ಥಿಕತೆಯ ಉದಾಹರಣೆ ಅಷ್ಟೇ, ಆದರೆ ಎಲ್ಲರಿಗೂ ಒಪ್ಪಿಗೆಯಾಗಬಲ್ಲ ಅನುಭವಜನ್ಯ ಉದಾಹರಣೆಗಳನ್ನು ಗುರುತಿಸುವಲ್ಲಿ ಮಾರ್ಷಲ್ ಅವರು ಕಷ್ಟಪಡುತ್ತಾರೆ. ಇಂತಹದೊಂದು ಸನ್ನಿವೇಶಕ್ಕೆ ತುಂಬಾ ಪ್ರಾಮುಖ್ಯತೆಯನ್ನು ಕೊಡುವುದರಿಂದ ಅವರು ಇದನ್ನು ತಮ್ಮ ಸಿದ್ಧಾಂತದ ವ್ಯಾಪ್ತಿಯೊಳಗೆ ಉಳಿಸಿಕೊಳ್ಳಲು

ಪ್ರಯತ್ನಿಸುತ್ತಾ ಅದಕ್ಕೆ ಧನಾತ್ಮಕವಾದ "ಹೊರಗಿನ ಪರಿಣಾಮ"ಗಳನ್ನು ಸೇರಿಸುತ್ತಾರೆ. ಈ ರೀತಿಯ ಪರಿಣಾಮಗಳು ಒಂದು ಕೈಗಾರಿಕೋದ್ಯಮದ ಬೆಳವಣಿಗೆಯ ಜೊತೆಯಲ್ಲಿ ಬರುತ್ತವೆ ಮತ್ತು ವಲಯದೊಳಗಿನ ಎಲ್ಲ ಉದ್ದಿಮೆಗಳ ಸರಾಸರಿ ವೆಚ್ಚವನ್ನು ಕಡಿಮೆ ಮಾಡುತ್ತವೆ; ಆದರೂ ಸಹ ಪ್ರತಿಯೊಂದು ಉದ್ದಿಮೆಯನ್ನು ಅದರಷ್ಟಕ್ಕೆ ತೆಗೆದುಕೊಂಡರೆ ಅದು ಏರುತ್ತಿರುವ ವೆಚ್ಚಗಳನ್ನು ಪ್ರದರ್ಶಿಸುತ್ತಿರುತ್ತದೆ; ಆ ಒಂದು ಉದ್ದಿಮೆಯ ಹೊರಗಿನ ಪರಿಣಾಮಗಳು ನಿಯಂತ್ರಣಕ್ಕೆ ಸಿಗುವುದಿಲ್ಲ. ಒಂದು ಕೈಗಾರಿಕೆಗೆ ಆಂತರಿಕವಾಗಿರುವ, ಹೆಚ್ಚುತ್ತಿರುವ ಲಾಭಗಳ ಕುರಿತಾದ ತಮ್ಮ ಪರಿಕಲ್ಪನೆಯನ್ನು ಮಾರ್ಷಲ್ ಅವರು ಒಂದು ಪರಿಮಿತವಾದ ಭೌಗೋಳಿಕ ಸ್ಥಳದಲ್ಲಿ ("ಕೈಗಾರಿಕಾ ಜಿಲ್ಲೆಗಳು") ವಿಸ್ತರಿಸಿಕೊಳ್ಳುತ್ತಿರುವ ಕೈಗಾರಿಕೆಯೊಂದಿಗೇ ಬರುವ ಉತ್ತಮ ಮಾಹಿತಿಯ ಮಟ್ಟದ ಮೂಲಕ ವಿವರಿಸುತ್ತಾರೆ. ಉದಾಹರಣೆಗೆ ಒಂದು ನಿರ್ದಿಷ್ಟ ಪ್ರದೇಶದೊಳಗೆ ಕಾರುಗಳು ಅಥವಾ ಯಂತ್ರೋಪಕರಣಗಳಂತಹ ಒಂದೇ ರೀತಿಯ ಉತ್ಪನ್ನಗಳನ್ನು ತಯಾರಿಸುವ ಸಮೂಹಗಳನ್ನು ಗಣನೆಗೆ ತೆಗೆದುಕೊಳ್ಳಿ. ಆಧುನಿಕ ಕಾಲದಲ್ಲಿ ಸಿಲಿಕಾನ್ ಕಣಿವೆಯಲ್ಲಿರುವ ಅತ್ಯುನ್ನತ ತಂತ್ರಜ್ಞಾನದ ಹಾಗೂ ಮಾಹಿತಿ ತಂತ್ರಜ್ಞಾನದ ಕೈಗಾರಿಕೆಯು ನಮ್ಮ ಮನಸ್ಸಿಗೆ ಬರಬಹುದು.

ಪರಿಮಾಣವನ್ನು ಅವಲಂಬಿಸಿರುವ ವೆಚ್ಚಗಳ ಸಂದರ್ಭದಲ್ಲಿ ("ಚರ"ವೆಚ್ಚಗಳು), ಒಂದು ಕೈಗಾರಿಕೋದ್ಯಮದ ದೀರ್ಘಕಾಲಿನ ಪೂರೈಕೆಯ ವಕ್ರರೇಖೆಯು, ಲಾಭಗಳು ಹೆಚ್ಚುತ್ತಿವೆಯೋ ಇಲ್ಲವೋ ಎನ್ನುವುದನ್ನು ಅವಲಂಬಿಸಿ ಏರುತ್ತಿರುವ ಅಥವಾ ಕುಸಿಯುತ್ತಿರುವ ಇಳಿಜಾರನ್ನು ಪ್ರದರ್ಶಿಸುತ್ತದೆ.

**ಸ್ರಾಫ್ಫಾ ಅವರ ಟೀಕೆ**

ಪಿಯೆರೊ ಸ್ರಾಫ್ಫಾ ಅವರು 1925 ಮತ್ತು 1926 ರಲ್ಲಿ ತಾವು ಬರೆದ ಎರಡು ಪ್ರಬಂಧಗಳ ಮೂಲಕ ಭಾಗಶಃ ವಿಶ್ಲೇಷಣೆಯನ್ನು ತೀವ್ರವಾದ ವಿಮರ್ಶೆಗೆ ಒಳಪಡಿಸಿದರು. ಅವರ ಮುಖ್ಯ ಟೀಕೆಗಳು ಹೀಗಿವೆ: ಚರ ವೆಚ್ಚಗಳಿರುವ ಕಾರ್ಖಾನೆಯೊಂದರಲ್ಲಿ ಉತ್ಪಾದನೆಯ ಗಾತ್ರವು ಬದಲಾದಲ್ಲಿ ಆಗ ಇತರ ಕೈಗಾರಿಕೆಗಳಲ್ಲಿ ಇರುವ ಉದ್ದಿಮೆಗಳ ವೆಚ್ಚಗಳು ಕೂಡ ಅದೇ ಸಮಯಕ್ಕೆ ಬದಲಾಗುತ್ತವೆ ಎಂಬುದನ್ನು ಅಲ್ಲಗಳೆಯಲಾಗದು. ಇದು ಮಾರ್ಷಲ್ ಅವರ ಮೂರನೇ ಉಪಾಧಿಗೆ ವ್ಯತಿರಿಕ್ತವಾಗಿರುತ್ತದೆ. ಉದಾಹರಣೆಗೆ ಎರಡು ಕೈಗಾರಿಕೆಗಳು ವಿಭಿನ್ನ ಸರಕುಗಳನ್ನು ಉತ್ಪಾದಿಸಲು; ಉದಾಹರಣೆಗೆ ಸೇಬುಗಳು ಮತ್ತು ಪೇರ್ ಹಣ್ಣುಗಳು; ಒಂದೇ ರೀತಿಯ ಭೂಮಿಯನ್ನು ಉಪಯೋಗಿಸಿದಾಗ ಹೀಗಾಗುತ್ತದೆ. ಸೇಬುಗಳ ಉತ್ಪಾದನೆಯು ಹೆಚ್ಚಾದಾಗ ಭೂಮಿಯ ಬಾಡಿಗೆಯು ಏರುತ್ತದೆ. ಆದರೆ ಇದು ಸೇಬು ಮತ್ತು ಪೇರ್ ಹಣ್ಣುಗಳು ಎರಡರ ವೆಚ್ಚ ಬಿಂಬಕವನ್ನು (ಘಟಕ ವೆಚ್ಚವನ್ನು) ಸಹ ಹೆಚ್ಚಿಸುತ್ತದೆ. ಇದರ ಜೊತೆಗೆ ಸೇಬುಗಳ ಉತ್ಪಾದನೆ ಹೆಚ್ಚಿರುವುದರಿಂದ, ಸೇಬುಗಳನ್ನು ಉತ್ಪಾದಿಸಲು ಅಗತ್ಯವಾದ ಒಳಸುರಿಗಳನ್ನು ಉತ್ಪಾದಿಸುವ ಉದ್ದಿಮೆಗಳ ವೆಚ್ಚದ ಪರಿಸ್ಥಿತಿಯು ಬದಲಾದರೆ ( ಉದಾಹರಣೆಗೆ ಗೊಬ್ಬರಗಳು ಅಥವಾ ಸುಗ್ಗಿಯ ಯಂತ್ರಗಳು) ಆಗ ಸೇಬುಗಳನ್ನು ಉತ್ಪಾದಿಸುವಲ್ಲಿನ ವೆಚ್ಚ ಬಿಂಬಕದ ಪರಿಸ್ಥಿತಿಯು ಬದಲಾಗುತ್ತದೆ.

ಎರಡು ಪ್ರಕರಣಗಳೂ ಸಹ ವಿಭಿನ್ನ ಕೈಗಾರಿಕೆಗಳಲ್ಲಿನ ಪೂರೈಕೆ ಬಿಂಬಕದ ಸ್ವಾತಂತ್ರಕ್ಕೆ ಸಂಬಂಧಿಸಿದಂತೆ ಒಂದರೊಂದಿಗೆ ಇನ್ನೊಂದು ಹೊಂದಿಕೊಳ್ಳುವುದಿಲ್ಲ ಮತ್ತು ಭಾಗಶಃ ವಿಶ್ಲೇಷಣೆಯ ಅನ್ವಯಿಸುವಿಕೆಯ ಕುರಿತಂತೆ ಅವು ಸಂಶಯಗಳನ್ನೆಬ್ಬಿಸುತ್ತವೆ. ಚರ ವೆಚ್ಚಗಳಿರುವ ಒಂದು ಕಾರ್ಖಾನೆಯ ಉತ್ಪಾದನಾ ಗಾತ್ರದಲ್ಲಿನ ಬದಲಾವಣೆಯು ಇತರ ಕೈಗಾರಿಕೆಗಳಲ್ಲಿನ ಉದ್ದಿಮೆಗಳ ವೆಚ್ಚವನ್ನು ಬದಲಾಯಿಸದಿದ್ದರೆ ಆಗ ಚರ ವೆಚ್ಚಗಳು ಆ ಕೈಗಾರಿಕೆಯ ಆಂತರಿಕ ಸಂಗತಿಯಾಗುತ್ತವೆ. ಉದಾಹರಣೆಗೆ ಒಂದೇ ಒಂದು ರೀತಿಯ ಸರಕನ್ನು ಉತ್ಪಾದಿಸಲು ಒಂದು ವಿಶಿಷ್ಟ ರೀತಿಯ ಭೂಮಿಯನ್ನು ಉಪಯೋಗಿಸಿದಾಗ ಹೀಗಾಗುವುದುಂಟು. (ಉದಾಹರಣೆಗೆ A ರೀತಿಯ ಭೂಮಿಯನ್ನು ಸೇಬಿನ

ಉತ್ಪಾದನೆಗೆ ಮತ್ತು B ರೀತಿಯ ಭೂಮಿಯನ್ನು ಪೇರ್ ಹಣ್ಣಿನ ಉತ್ಪಾದನೆಗೆ ಉಪಯೋಗಿಸಲಾಗಿರುತ್ತದೆ). ಆದರೆ ಈ ಪ್ರಕರಣವು ಪ್ರಾಯೋಗಿಕವಾಗಿ ಬಹಳ ಮುಖ್ಯವಾಗಿಲ್ಲದಿರುವುದರಿಂದ, ಸ್ರಫ್ಫಾ ಅವರು ಸ್ಥಿರವಾದ ಲಾಭ ದೊರಕುತ್ತಿರುವ ಪ್ರಕರಣದಲ್ಲಿ ಬೇಡಿಕೆಯು ಬೆಲೆಯ ಮೇಲೆ ಮತ್ತು ಸ್ಥಿರವಾದ ಘಟಕ ವೆಚ್ಚದ ಮೇಲೆ ಪ್ರಭಾವ ಬೀರದಿರುವುದರಿಂದ, ಎಲ್ಲಾ ಒಳಸುರಿಗಳ ಬೆಲೆಗಳು ಲಭ್ಯವಾಗಿದ್ದಾಗ ಅಸ್ಥಿರ ವೆಚ್ಚದ ಉದಾಹರಣೆಯು ಒಂದೋ ಸ್ಪರ್ಧೆಯ ಕಲ್ಪನೆಯೊಂದಿಗೆ ಹೊಂದಿಕೆಯಾಗುವುದಿಲ್ಲ (ಹೆಚ್ಚುತ್ತಿರುವ ಲಾಭಗಳು ಉದ್ದಿಮೆಗೆ ಆಂತರಿಕವಾಗಿರುವುದಾದರೆ) ಅಥವಾ ಇದು ಭಾಗಶಃ ವಿಶ್ಲೇಷಣೆಯ ವ್ಯಾಪ್ತಿಯ ಹೊರಗೆ ಬೀಳುತ್ತದೆ ಮತ್ತು ಅದಕ್ಕೆ ಸಾಮಾನ್ಯ ವಿಶ್ಲೇಷಣೆ ಅಗತ್ಯವಾಗುತ್ತದೆ ಅಥವಾ ಇದರ ಬೆಂಬಲಕ್ಕಾಗಿ ನಂಬಲರ್ಹವಾದ ಪ್ರಾಯೋಗಿಕ ಸಾಕ್ಷಿಯನ್ನು ಒದಗಿಸುವುದು ಕಷ್ಟವಾಗುತ್ತದೆ. ಹೀಗಾಗಿ ವಿಶ್ಲೇಷಣೆಯ ವಿವರಣಾತ್ಮಕ ಮೌಲ್ಯವು ಅತ್ಯಂತ ಕಡಿಮೆಯಾಗುತ್ತದೆ.

ಕೈಗಾರಿಕೆಗಳ ನಡುವೆ ಪರಸ್ಪರ ಅವಲಂಬನೆ ಇರುವ ಕಾರಣದಿಂದ ಒಂದೇ ಒಂದು ಒಳಸುರಿಯ ಅಥವಾ ಉತ್ಪನ್ನದ ಬೆಲೆಯನ್ನು ಬದಲಾಯಿಸುವುದು ಮತ್ತು ಶೂನ್ಯದಲ್ಲಿರುವುದೇನೋ ಎಂಬಂತೆ ಒಂದು ಏಕೈಕ ಮಾರುಕಟ್ಟೆಯಲ್ಲಿ ಅಂತಹ ಬದಲಾವಣೆಯಿಂದ ಆಗುವ ಪ್ರಭಾವವನ್ನು ವಿಶ್ಲೇಷಿಸುವುದು ಸಾಮಾನ್ಯವಾಗಿ ಸಾಧ್ಯವಿಲ್ಲ. ಆರ್ಥಿಕ ವ್ಯವಸ್ಥೆಯಲ್ಲಿ ಯಾವಾಗಲೂ ಪರಿಣಾಮಗಳು ಉಂಟಾಗಲಿದ್ದು ಅವು ಕೇವಲ ಪರಿಮಾಣಾತ್ಮಕವಾಗಿ ಮಾತ್ರವಲ್ಲದೆ ಗುಣಾತ್ಮಕವಾಗಿಯೂ ಸಹ ಫಲಿತಾಂಶದ ಮೇಲೆ ಪ್ರಭಾವ ಬೀರುತ್ತವೆ. ಹೀಗಾಗಿ ಬಹಳ ಎಚ್ಚರಿಕೆಯಿಂದ ಭಾಗಶಃ ಸಮತೋಲನದ ವಿಶ್ಲೇಷಣೆಯನ್ನು ಅನ್ವಯಿಸಬೇಕಾಗುತ್ತದೆ ಮತ್ತು ಅದರ ಫಲಿತಾಂಶಗಳನ್ನು ಹೆಚ್ಚು ಸಾಮಾನ್ಯವಾದ ವಿಶ್ಲೇಷಣೆಯ ಚೌಕಟ್ಟಿನೊಳಗೆ ಎಚ್ಚರಿಕೆಯಿಂದ ಪರೀಕ್ಷೆಗೆ ಒಳಪಡಿಸಿ ಅಳವಡಿಸಿಕೊಳ್ಳಬೇಕಾಗುತ್ತದೆ. ಆ ದಿನಗಳಲ್ಲಿ ಸ್ರಫ್ಫಾ ಅವರ ವಿಮರ್ಶೆಯನ್ನು ವ್ಯಾಪಕವಾಗಿ ಚರ್ಚಿಸಲಾಯಿತು. ಜೋಸೆಫ್ ಎ ಶುಂಪೀಟರ್ ಅವರು ಸ್ರಫ್ಫಾ ಅವರ "ಉಜ್ವಲವಾದ ಸ್ವೋಪಜ್ಞ ಸಾಧನೆ"ಯ ಕುರಿತು ಮಾತನಾಡಿದರು. ಮೂಲತಃ ಸೀಮಾಂತವಾದದ ಆಸ್ಟ್ರಿಯ ದೇಶದ ಮಾದರಿಯ ವಕ್ತಾರರಾದ ಓಸ್ಕಾರ್ ಮಾರ್ಜೆನ್ ಸ್ಟರ್ನ್ (1902;1977) ಅವರು, ಸ್ರಫ್ಫಾ ಅವರ ಟೀಕೆಯಿಂದಾಗಿ ಹೀಗೆಂದು ತೀರ್ಮಾನಿಸಿದರು: 1. "ಭಾಗಶಃ ಸೀಮಾಂತವಾದದ ವಿಧಾನವನ್ನು ವಿಪರೀತವಾಗಿ ಉತ್ಪ್ರೇಕ್ಷಿಸಲಾಗಿದೆ" 2. ಬೇಡಿಕೆ ಮತ್ತು ಪೂರೈಕೆಯ ಮಧ್ಯೆ ಇದೆ ಎನ್ನಲಾದ ಸಮ್ಮಿತಿಯು ಸಂಶಯಾಸ್ಪದವಾದದ್ದು. ಉತ್ಪನ್ನಕ್ಕೆ ಸಂಬಂಧಿಸಿದ ಸಣ್ಣಪುಟ್ಟ ಬದಲಾವಣೆಗಳಿಗೆ ಸಂಬಂಧಿಸಿದಂತೆ ಸ್ರಫ್ಫಾ ಅವರು ವಾದಿಸುವಂತೆ, ದೀರ್ಘಕಾಲೀನ ವಿಶ್ಲೇಷಣೆಯಲ್ಲಿನ ಸ್ಥಿರ ಲಾಭಗಳಿಂದ ಆರಂಭಿಸುವುದು ಅತ್ಯಂತ ಒಳ್ಳೆಯದು ಎನ್ನುವುದಾದರೆ ಬೇಡಿಕೆಯ ಭಾಗದ ಪ್ರಾಮುಖ್ಯತೆ ಮತ್ತು ಮಾರ್ಷಲ್ ಅವರ ದೃಷ್ಟಿಕೋನವೇ ಪ್ರಶ್ನಾರ್ಹವಾಗುತ್ತವೆ.

ಸ್ರಫ್ಫಾ ಅವರ ವಿಮರ್ಶೆಗೆ ಸಂಬಂಧಿಸಿದಂತೆ ಕೆಲವೊಂದು ಪ್ರತಿಕ್ರಿಯೆಗಳಿರುವುದು ಸಾಧ್ಯ. ಮೊದಲನೆಯದಾಗಿ, ಭಾಗಶಃ ಸಮತೋಲನದ ವಿಧಾನವನ್ನು ಕೈಬಿಡಬೇಕಾಗುತ್ತದೆ ಆದರೆ ಪರಿಪೂರ್ಣ ಸ್ಪರ್ಧೆಯ ಪರಿಸ್ಥಿತಿಗಳಲ್ಲಿ ಬೇಡಿಕೆ ಮತ್ತು ಪೂರೈಕೆಯ ವಿಧಾನಕ್ಕೆ ಅಂಟಿಕೊಳ್ಳಬೇಕಾಗುತ್ತದೆ. ಅಂತಹ ಉದಾಹರಣೆಯಲ್ಲಿ ಆರ್ಥಿಕತೆಯಲ್ಲಿನ ವಿವಿಧ ಪಾತ್ರಧಾರಿಗಳು ಮತ್ತು ಕಾರ್ಖಾನೆಗಳ ನಡುವೆ ಇರುವ ಅಂತರ್; ಅವಲಂಬನೆಯನ್ನು ಪರಿಗಣನೆಗೆ ತೆಗೆದುಕೊಂಡಿರುವಂತಹ ಸಾಮಾನ್ಯ ಸಮತೋಲನದ ಚೌಕಟ್ಟನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ನಾನು ಅಂತಹ ಕೊಡುಗೆಗಳ ಬಗ್ಗೆ ಅಧ್ಯಾಯ 6 ಮತ್ತು 11 ರಲ್ಲಿ ಚರ್ಚಿಸಲಿದ್ದೇನೆ. ಎರಡನೆಯದಾಗಿ, ಭಾಗಶಃ ಸಮತೋಲನದ ವಿಧಾನವನ್ನು ಮತ್ತು ಬೇಡಿಕೆ ಮತ್ತು ಪೂರೈಕೆಯ ದೃಷ್ಟಿಕೋನವನ್ನು ಸಹ ಕೈ ಬಿಟ್ಟು ಅಭಿಜಾತ ಅರ್ಥಶಾಸ್ತ್ರಜ್ಞರ ಮಿಗುತಾಯ ದೃಷ್ಟಿಕೋನಕ್ಕೆ ಹಿಂತಿರುಗಬೇಕಾಗುತ್ತದೆ. ಇದು ಕೈಗಾರಿಕೆಗಳ ನಡುವಿನ ಸ್ವಾತಂತ್ರಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಸಾಮಾನ್ಯ ವಿಶ್ಲೇಷಣಾ ಚೌಕಟ್ಟನ್ನು ಒಳಗೊಳ್ಳುತ್ತದೆ. ಇದಕ್ಕೆ ಸಂಬಂಧಿಸಿದ ಸಾಹಿತ್ಯದ ಕೊಡುಗೆಯನ್ನು

ಅಧ್ಯಾಯ 12 ರಲ್ಲಿ ಚರ್ಚಿಸುತ್ತೇನೆ. ಮೂರನೆಯದಾಗಿ, ಪರಿಪೂರ್ಣ ಸ್ಪರ್ಧೆಯ ಕಲ್ಪನೆಯನ್ನು ಕೈ ಬಿಡಲಾಗುತ್ತದೆ ಆದರೆ ಭಾಗಶಃ ಸಮತೋಲನದ ಚೌಕಟ್ಟನ್ನು ಉಳಿಸಿಕೊಳ್ಳಲಾಗುತ್ತದೆ. ಇದು ಅನೇಕ ಮಾರುಕಟ್ಟೆ ಸ್ವರೂಪಗಳ ಕಡೆಗೆ ಗಮನವನ್ನು ತಿರುಗಿಸುವ ಅಪರಿಪೂರ್ಣ ಅಥವಾ ಏಕಸ್ವಾಮ್ಯ ಸ್ಪರ್ಧೆಯ ಸಿದ್ಧಾಂತಗಳ ಕಡೆಗೆ ಬೊಟ್ಟು ಮಾಡುತ್ತದೆ. ನಾನು ಅಧ್ಯಾಯ 7 ರಲ್ಲಿ ಈ ಸಿದ್ಧಾಂತಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಿದ್ದೇನೆ. ಆದರೆ ಅದನ್ನು ಕೈಗೆತ್ತಿಕೊಳ್ಳುವ ಮುನ್ನ ನಾನು ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕಂಡುಬಂದ ಕೆಲವೊಂದು ಮುಖ್ಯ ಪ್ರವೃತ್ತಿಗಳು ಹಾಗೂ ಚರ್ಚೆಗಳ ಕುರಿತು ಸಂಕ್ಷಿಪ್ತವಾದ ಸಾರಾಂಶವನ್ನು ಮುಂದಿಡುತ್ತೇನೆ.

***